## ದಿನಂಪ್ರತಿ ಅಪರಾಧಗಳ ಮಾಹಿತಿ ದಿನಾಂಕ : 09-09-2022

**ಧನ್ನೂರಾ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 125/2022 ಕಲಂ. 279, 304(ಎ) ಐಪಿಸಿ :-**

ದಿನಾಂಕ: 07/09/2022 ರಂದು ಫರ್ಯಾದಿ ಬಾಲಾಜಿ ತಂದೆ ನರಸಪ್ಪಾ ಮೆತ್ರೆ ವಯ: 60 ರ್ಷ, ಜಾತಿ: ಎಸ್.ಟಿ ಗೊಂಡ ಉ: ಒಕ್ಕಲುತನ ಸಾ: ಚಾಂಡೆಶ್ವರ ತಾ: ಕಮಲನಗರ ಇವರ ಮಗ ಮದ್ಯಾಹ್ನದ ವೇಳೆಯಲ್ಲಿ ಚಾಂಡೆಶ್ವರದಿಂದ ಬಾಳೂರದಲ್ಲಿ ಇರುವ ಫರ್ಯಾದಿಯ ಮಗಳು ಚಂದ್ರುಕಲಾ ಇವರ ಮನೆಗೆ ಹೊಗಿರುತ್ತಾನೆ. ನಂತರ ಸಾಯಂಕಾಲ 6:00 ಪಿಎಂ ಸುಮಾರಿಗೆ ಫರ್ಯಾದಿಯ ಮಗ ಬೀರಗೊಂಡ ಮೆತ್ರೆ ವಯ: 26 ರ್ಷ ಇತನು ತನ್ನ ಮೊಟಾರ ಸೈಕಲ ನಂ. ಕೆಎ-38 ಎಕ್ಸ-6139 ನೇದನ್ನು ಚಾಯಿಸಿಕೊಂಡು ಬಾಳೂರದಿಂದ ಚಾಂಡೆಶ್ವರಕ್ಕೆ ಹೊರಟ್ಟಿರುತ್ತಾನೆ. ಆದರೆ ರಾತ್ರಿ ಯಾದರು ಮನೆಗೆ ಬಂದಿರುವುದಿಲ್ಲ. ನಂತರ ದಿನಾಂಕ: 08/09/2022 ರಂದು 8:00 ಎಎಂ ಸುಮಾರಿಗೆ ನನ್ನ ಮಗ ಬೀರಗೊಂಡ ಇವರ ಮೃತ ದೇಹವು ಕೊಟಗ್ಯಾಳ ಬಾಳೂರ ರಸ್ತೆಯ ಕೊಟಗ್ಯಾಳ ಗ್ರಾಮ ಸಿವಾರದ ಕೆನಾಲ ಹತ್ತಿರ ಸಿಕ್ಕಿರುವ ಮಾಹಿತಿ ಗೊತ್ತಾಗಿ ನಾನು ಮತ್ತು ನಮ್ಮೂರ ಜನರು ಕೂಡಿಕೊಂಡು ಸ್ಥಳಕ್ಕೆ ಬಂದು ನೊಡಲು ನನ್ನ ಮಗ ಬೀರಗೊಂಡ ಇವರು ಬಾಳೂರದಿಂದ ನಮ್ಮೂರಿಗೆ ಮೊಟಾರ ಸೈಕಲ ಚಲಾಯಿಸಿಕೊಂಡು ಬರುವಾಗ ಕೊಟಗ್ಯಾಳ ಗ್ರಾಮದ ಕೇನಾಲ ಹತ್ತಿರ ಮೊಟಾರ ಸೈಕಲ ವೇಗವಾಗಿ ಚಲಾಯಿಸಿದ್ದರಿಂದ ಮೊಟಾರ ಸೈಕಲ ಹಿಡಿತ ತಪ್ಪಿ ಕೈನಾಲಕ್ಕೆ ಡಿಕ್ಕಿ ಹೊಡೆದು ಮೊಟಾರ ಸೈಕಲ ಸಮೆತವಾಗಿ ನನ್ನ ಮಗ ಬೀರಗೊಂಡ ಇವರು ಕೇನಾಲದಲ್ಲಿ ಬಿದ್ದಿರುತ್ತಾನೆ. ಈ ಘಟನೆಯಿಂದ ನನ್ನ ಮಗನಿಗೆ ತಲೆಯ ಭಾಗದಲ್ಲಿ ಕೀವಿಯ ಹತ್ತಿರ ಭಾರಿ ರಕ್ತಗಾಯ, ಬಲ ಭುಜಕ್ಕೆ ಭಾರಿ ರಕ್ತಗಾಯ, ಬಲಗೈ ಮೊಳಕೈ ಹತ್ತಿರ ತರಚಿದ ರಕ್ತಗಾಯ ಮತ್ತು ಎಡಕಿವಿಯ ಹತ್ತಿರ ರಕ್ತಗಾಯ ಹಾಗು ಇತರ ಕಡೆ ಮೈಮೆಲೆ ಗುಪ್ತಗಾಯಗಳಾಗಿ ನನ್ನ ಮಗ ಬೀರಗೊಂಡ ಇವರು ಮೃತ ಪಟ್ಟಿರುತ್ತಾನೆ ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಬೀದರ ಸಂಚಾರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 90/2022 ಕಲಂ 279, 338 ಐಪಿಸಿ ಜೊತೆ 187 ಐಎಂವಿ ಕಾಯ್ದೆ :-**

ದಿನಾಂಕ 08.09.2022 ರಂದು 1800 ಗಂಟೆಗೆ ಫರ್ಯಾದಿ ಶ್ರೀ ಬಸವರಾಜ ತಂದೆ ವೈಜಿನಾಥ ದಾನಿ, ವಯ: 41 ರ್ಷ, ಜಾತಿ: ಲಿಂಗಾಯತ, ಉ: ಕೂಲಿ ಕೆಲಸ ಸಾ|| ಧನ್ನೂರ (ಹೆಚ್) ತಾ: ಭಾಲ್ಕಿ ಜಿ: ಬೀದರ ರವರು ಠಾಣೆಗೆ ಬಂದು ದೂರು ನೀಡಿದ್ದು ಸಾರಾಂಶವೆನೆಂದರೆ, ದಿನಾಂಕ 08.09.2022 ರಂದು ನಾನು ಮನೆಯಲ್ಲಿ ಇದ್ದಾಗ ನಮ್ಮ ಊರಿನ ಪ್ರಶಾಂತ ತಂದೆ ವಿಜಯಕುಮಾರ ದಾನಿ, ವಯ ರವರು ಫೊನ ಮಾಡಿ, ನಿಮ್ಮ ತಂದೆಗೆ ಆಕ್ಸಿಡೆಂಟ್ ಆಗಿದ್ದು, ನಾನು ಚಿಕಿತ್ಸೆ ಕುರಿತು ಬೀದರ ಸರಕಾರಿ ಆಸ್ಪತ್ರೆ ಕರೆದುಕೊಂಡು ಹೋಗುತ್ತಿದ್ದು, ನೀವು ಬೇಗನೆ ಬರೀ ಅಂತಾ ತಿಳಿಸಿದ ಮೇರೆಗೆ ನಾನು ಗಾಬರಿಗೊಂಡು ಆಸ್ಪತ್ರೆಗೆ ಬಂದು ನೋಡಲು ನಮ್ಮ ತಂದೆ ವೈಜಿನಾಥ ರವರು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಅವರಿಗೆ ತಲೆಗೆ ಭಾರಿ ರಕ್ತಗಾಯವಾಗಿ, ಬಲ ಕಿವಿಯಿಂದ ರಕ್ತ ಬಂದಿರುತ್ತದೆ. ಬಲಕಾಲ ಪಾದದ ಹೆಬ್ಬರಳಿಗೆ ರಕ್ತಗಾಯವಾಗಿರುತ್ತದೆ. ಆಗ ಅಲ್ಲೇ ಇದ್ದ ಪ್ರಶಾಂತ ರವರಿಗೆ ವಿಚಾರಿಸಲು ಅವರು ತಿಳಿಸಿದೆನೆಂದರೆ, ದಿನಾಂಕ 08.09.2022 ರಂದು ನಿಮ್ಮ ತಂದೆ ವೈಜಿನಾಥ ತಂದೆ ಗುರುಬಸಪ್ಪಾ ದಾನಿ, ವಯ 70 ರ್ಷ, ಜ್ಯಾತಿ ಲಿಂಗಾಯತ, ಉ: ಕೂಲಿ ಕೆಲಸ ಸಾ|| ಧನ್ನೂರ (ಹೆಚ್) ತಾ: ಭಾಲ್ಕಿ ಜಿ: ಬೀದರ ರವರು ಊರಿಗೆ ಬರಲು ಅಂಬೇಡ್ಕರ ವೃತ್ತದ ಕಡೆಯಿಂದ ನೆಹರು ಸ್ಟಡಿಯಂ ಕಡೆಗೆ ನಡೆದುಕೊಂಡು ಬರಲು ವಿರಭದ್ರೆಶ್ವರ ಸಾರಿ ಸೆಂಟರ ಹತ್ತಿರ ಬಂದಾಗ ಹಿಂದಿನಿಂದ ಅಂದರೆ ಅಂಬೇಡ್ಕರ ವೃತ್ತದ ಕಡೆಯಿಂದ ಒಂದು ಆಟೋ ನಂ. ಕೆಎ38/ಎ3690 ನೇದರ ಚಾಲಕ ತನ್ನ ಆಟೋವನ್ನು ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ಮದ್ಯಾನ 2:15 ಗಂಟೆ ಸುಮಾರಿಗೆ ಡಿಕ್ಕಿ ಮಾಡಿ, ಆಟೋ ಸಮೇತ ಕರಿಯಪ್ಪ ವೃತ್ತದ ಕಡೆಗೆ ಓಡಿ ಹೋಗಿರುತ್ತಾನೆ. ಪರಿಣಾಮ ಈ ಗಾಯಗಳು ಆಗಿರುತ್ತವೆ. ನಾನು ನೋಡಿ ಬೀದರ ಸರಕಾರಿ ಆಸ್ಪತ್ರೆಗೆ ತಂದು ಸೇರಿಕೆ ಮಾಡಿರುತ್ತೇನೆ ಅಂತ ತಿಳಿಸಿರುತ್ತಾನೆ. ಕಾರಣ ಆಟೋ ಚಾಲಕನ ವಿರುದ್ದ ಕಾನೂನು ಕ್ರಮ ಕೈಕೊಳ್ಳಲು ವಿನಂತಿ ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಚಿಟಗುಪ್ಪಾ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 111/2022 ಕಲಂ . 279, 338 ಐಪಿಸಿ ಜೊತೆ 187 ಐ.ಎಮ್.ವಿ. ಕಾಯ್ದೆ :-**

ದಿನಾಂಕ:08/09/2022 ರಂದು 2100 ಗಂಟೆಗೆ ಫರ್ಯಾದಿ ಯಲ್ಲಮ್ಮಾ ಗಂಡ ಯಲ್ಲಪ್ಪಾ ಯೇರಸನ ವಯ:32 ರ್ವ, ಜಾ: ಹೇಳವಾ, ಉ: ಕೂಲಿ ಕೆಲಸ, ಸಾ/ ಹಣಕುಣಿ ತಾ/ಹುಮನಾಬಾದ ರವರು ಠಾಣೆಗೆ ಹಾಜರಾಗಿ ಹೇಳಿಕೆ ಸಾರಂಶವೆನೆಂದರೆ ನಮ್ಮ ನಾದಿನಿಯಾದ ನರಸಮ್ಮಳು ಡೆಲಿವರಿ ಸಲುವಾಗಿ ನಮ್ಮ ಮನೆಗೆ ಬಂದು ಉಳಿದುಕೊಂಡಿರುತ್ತಾಳೆ. ನರಸಮ್ಮಳ ಡೆಲಿವರಿಯು 15 ದಿವಸಗಳ ಹಿಂದೆ ಆಗಿದ್ದು, ಅವಳ ಗಂಡ ಅಶೋಕ ತಂದೆ ಕಾಶಪ್ಪಾ ವಜನದಾರ ವಯ:27 ರ್ವ, ಸಾ: ಜೇರಪೇಟ ಹುಮನಾಬಾದ ರವರು ಹೆರಿಗೆ ಆಗಿದ್ದರಿಂದ ನಮ್ಮ ನಾದಿನಿಗೆ ನೋಡಿಕೊಂಡು ಹೋಗಲು ಹಣಕುಣಿಗೆ ಗ್ರಾಮಕ್ಕೆ ಬಂದು ನಂತರ ಚಹ ಕುಡಿಯಲು ಹೋಟೆಲ ಕಡೆಗೆ ನಡೆದುಕೊಂಡು ಹೋಗುವಾಗ ಹಣಕುಣಿ ಗ್ರಾಮದ ಬಸ ನಿಲ್ದಾಣದ ಹತ್ತಿರ ಇಂದು ದಿನಾಂಕ:08/09/2022 ರಂದು ಸಾಯಂಕಾಲ 04.00 ಗಂಟೆಯ ಸುಮಾರಿಗೆ ವಳಖಿಂಡಿ ಕಡೆಯಿಂದ ಬಂದ ಒಂದು ಲಾರಿ ನಂ:ಎಮ್.ಹೆಚ್:10 ಝಡ್-2570 ನೇದರ ಚಾಲಕನಾದ ರ್ಜುನ ತಂದೆ ಪುಂಡಲಿಕ ನಡವಿನದೊಡ್ಡಿ ಸಾ/ಮುಸ್ತಾಪೂರ ಈತನು ತನ್ನ ಲಾರಿಯನ್ನು ಅತಿ ವೇಗ ಹಾಗು ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬಂದು ನಮ್ಮ ನಾದಿನಿಯ ಗಂಡನಾದ ಅಶೋಕ  ತಂದೆ ಕಾಶಪ್ಪಾ ವಜನದಾರ ಇತನಿಗೆ ಡಿಕ್ಕಿ ಮಾಡಿ ಅಪಘಾತ ಪಡಿಸಿ ತನ್ನ ವಾಹನವನ್ನು ನಿಲ್ಲಿಸದೆ ಓಡಿಸಿ ಕೊಂಡು ಹೋಗಿರುತ್ತಾನೆ. ಸದರಿ ಅಪಘಾತದಿಂದ ಅಶೋಕನಿಗೆ ಎಡಗಾಲನ ಕಣ್ಣಿನ ಹತ್ತಿರ ಭಾರಿ ಗುಪ್ತಗಾಯವಾಗಿ ಎಡಗಾಲ ತೊಡಗೆ ಮತ್ತು ಎಡಗಾಲ ಕಣ್ಣಿನ ಹತ್ತಿರ ತರಚಿದ ರಕ್ತಗಾಯವಾಗಿರುತ್ತದೆ. ಅಲ್ಲೆ ಇದ್ದ ನಾನು ಮತ್ತು ನಮ್ಮ ನಾದಿನಿ ನರಸಮ್ಮ ಹಾಗು ನಮ್ಮ ಅತ್ತೆಯಾದ ನಾಗಮ್ಮ ಎಲ್ಲರು ನೋಡಿ ಎಬ್ಬಿಸಿ ನಂತರ 108 ಅಂಬುಲೇನ್ಸಗೆ ಕರೆ ಮಾಡಿ ಚಿಕಿತ್ಸೆ ಕುರಿತು ಅಶೋಕನಿಗೆ ಹುಮನಾಬಾದ ಸರಕಾರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿ ಹೆಚ್ಚಿನ ಚಿಕಿತ್ಸೆ ಕುರಿತು ಬೀದರಕ್ಕೆ ಕಳೂಹಿಸಲಾಗಿದೆ ಎಂದು ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ನೂತನ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 163/2022 ಕಲಂ 379 ಐಪಿಸಿ :-**

ದಿನಾಂಕ 08/09/2022 ರಂದು 0145 ಗಂಟೆಗೆ ಫಿರ್ಯಾದುದಾರರಾದ  ಶ್ರೀ. ಅಮೃತ ತಂದೆ ಅಣೆಪ್ಪಾ ವಾಲಿ ವಯ:43 ವರ್ಷ ಜಾತಿ: ಲಿಂಗಾಯತ ಉ:ವ್ಯಾಪಾರ ಸಾ/ಕಮಲಪೂರ ಸಧ್ಯ ಗುರುನಾನಕ ಕಾಲೋನಿ ಬೀದರ ನಿವಾಸಿ ಇವರು ಠಾಣೆಗೆ ಹಾಜರಾಗಿ ದೂರಿನ ಸಾರಾಂಶವೇನೆAದರೆ, ನಾನು ಪುಸ್ತಕ ಮಳಿಗೆ ಇಟ್ಟುಕೊಂಡು ವ್ಯಾಪಾರ ಮಾಡಿಕೊಂಡು ಉಪಜೀವಿಸಿಕೊಂಡಿರುತ್ತೇನೆ. ನಮ್ಮ ಭಾವಮ್ಮೆದ ರವರಾದ ಶ್ರೀ ಸಂಗಮೇಶ ತಂದೆ ಬಸವರಾಜ ಹುಮನಾಬಾದೆ ರವರು ಒಂದು ಸ್ಪೆ÷ಂಡರ ಪ್ಲಸ ಮೊಟರ ಸೈಕಲ ನಂ. ಕೆಎ38ಯು2100 ನೇದನ್ನು 2017 ಸಾಲೀನಲ್ಲಿ  ಖರೀದಿಸಿದ್ದು,ಅದು ಅವರ ಹೆಸರಿನಲ್ಲಿದ್ದು, ಅದನ್ನು ನಾನು ಸುಮಾರು ಒಂದುವರೆ ವರ್ಷದಿಂದ ಉಪಯೋಗಿಸುತ್ತಿದ್ದು ಇರುತ್ತದೆ. ನನ್ನ ಹೆಂಡತಿಯವರು ವಿಜಯನಗರ ಕಾಲೋನಿಯಲ್ಲಿರುವ ಬಿಲಗುಂದಿ ಆಸ್ಪತ್ರೆಯಲ್ಲಿ ಕೆಲಸ ಮಾಡುತಿದ್ದು ಇರುತ್ತದೆ.ದಿನಾಂಕ 28/08/2022 ರಂದು 00:30. ಗಂಟೆಗೆ ನನ್ನ ಮೊಟರ ಸೈಕಲನ್ನು ಬೀದರ ನಗರದ ಬಿಲಗುಂದಿ ಆಸ್ಪತ್ರೆಯ ಎದುರಿಗೆ ನಿಲ್ಲಿಸಿ ಆಸ್ಪತ್ರೆಯಲ್ಲಿ ಹೋಗಿ ನನ್ನ ಹೆಂಡತಿಯವರಿಗೆ ಭೇಟಿ ಮಾಡಿ ಹೊರಗೆ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆದು ಮುಂಜಾನೆ 06:30 ಗಂಟೆಯ ಸಮಯಕ್ಕೆ ಆಸ್ಪತ್ರೆಯಿಂದ ಹೋರಗೆ ಬಂದು  ನೋಡಿದಾಗ ನನ್ನ ಮೊಟರ ಸೈಕಲ ನಾನು ಇಟ್ಟಿದ್ದ ಜಾಗದಲ್ಲಿ ಇದ್ದಿರುವದಿಲ್ಲ. ನನ್ನ ಮೊಟರ ಸೈಕಲ ಕಳವು ಆದ ಬಗ್ಗೆ ನನ್ನ ಭಾವಮ್ಮೆದರಾದ ಶ್ರೀ  ಸಂಗಮೇಶ ಇವರಿಗೆ ತಿಳಿಸಿದೆನು. ನಂತರ ನಾನು ಮತ್ತು ಅವರು ಕೂಡಿಕೊಂಡು ಕಳವು ಆದ ಮೊಟರ ಸೈಕಲನ್ನು ಎಲ್ಲಾ ಕಡೆಗೆ ಹುಡುಕಾಡಲಾಗಿ ಎಲ್ಲಿಯೂ ಸಿಗಲಿಲ್ಲ. ಕಳ್ಳತನವಾದ ಮೊಟರ ಸೈಕಲ ವಿವರ ಹೀಗಿರುತ್ತದೆ: ಹೀರೊ  ಸ್ಪೆ÷ಂಡರ ಮೊಟರ ಸೈಕಲ ನಂ. ಕೆಎ38/ಯು2100 ಚಾ.ನಂ.  ಎಂಬಿಎಲಹೆಚಎ10ಸಿಜಿಹೆಚಹೆಚೆ05092  ಇಂಜಿನ ನಂ.  ಹೆಚೆ10ಇಆರಹೆಚಹೆಚೆ05272 ಮಾಡಲ್: 2017 ಉ:ಏ (ಕಪ್ಪು ಬಣ್ಣ)  ಇದ್ದು ಅಂದಾಜು ಕಿಮ್ಮತ್ತು ರೂ- 35,000/-ರೂ ಆಗಿರುತ್ತದೆ.  ಕಳುವಾದ ಮೊಟರ ಸೈಕಲನ್ನು ಎಲ್ಲ ಕಡೆಗೆ ಹುಡುಕಾಡಿ ಎಲ್ಲಿಯೂ ಸಿಗದಿದ್ದಾಗÀ ಠಾಣೆಗೆ ಬಂದು ದೂರು ನೀಡಲು ತಡವಾಗಿರುತ್ತದೆ. ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ

**ಜನವಾಡಾ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 96/2022 ಕಲಂ 87 ರ್ನಾಟಕ ಪೊಲೀಸ್ ಕಾಯ್ದೆ :-**

ದಿನಾಂಕ: 08/09/2022 ರಂದು ಪಿಎಸ್ಐ ರವರಿಗೆ ಪಾಂಡುರಂಗ ಮಂದಿರದ ಮುಂದುಗಡೆ ಇರುವ ಕಟ್ಟೆಯ ಮೇಲೆ ಖುಲ್ಲಾ ಜಾಗೆಯಲ್ಲಿ ಸರ್ವಜನಿಕ ಸ್ಥಳದಲ್ಲಿ ಕೆಲವು ಜನರು ಇಸ್ಪಿಟ್ ಜೂಜಾಟದಲ್ಲಿ ತೊಡಗಿರುವ ಬಗ್ಗೆ ಮಾಹಿತಿ ಮೇರೆಗೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಹೊಗಿ ಪಾಂಡುರಂಗ ಮಂದಿರದ ಮುಂಭಾಗದಲ್ಲಿರುವ ಕಟ್ಟೆಯ ಮೇಲೆ ಖುಲ್ಲಾ ಜಾಗೆಯಲ್ಲಿ ಲೈಟಿನ ಬೆಳಕಿನಲ್ಲಿ 7 ಜನರು ಗುಂಪಾಗಿ ಕುಳಿತು ಹಣ ಪಣಕ್ಕೆ ಕಟ್ಟಿ ಅಂದರ-ಬಾಹರ್ ಎಂಬ ನಸೀಬಿನ ಇಸ್ಪಿಟ್ ಜೂಜಾಟ ಆಡುತ್ತಿದ್ದು ಈ ಬಗ್ಗೆ ಖಚಿತಪಡಿಸಿಕೊಂಡು ಅವರ ಮೇಲೆ ದಾಳಿ ಮಾಡಿದ್ದು, ಜೂಜಾಟದಲ್ಲಿ ತೊಡಗಿದವರಿಗೆ ಸಿಬ್ಬಂದಿಯವರ ಸಹಾಯದಿಂದ ಮೂರು ಜನರಿಗೆ ಹಿಡಿದುಕೊಂಡಿದ್ದು 4 ಜನರು ಓಡಿ ಹೊಗಿರುತ್ತಾರೆ. ಹಿಡಿದುಕೊಂಡವರ ಹೆಸರು ಮತ್ತು ವಿಳಾಸ ವಿಚಾರಿಸಲಾಗಿ ತಮ್ಮ ಹೆಸರು 1] ಶಿವಕಾಂತ ತಂದೆ ಪ್ರಕಾಶರಾವ ಪಾಂಡ್ರೆ ವಯ: 31 ರ್ಷ ಉ: ಕಿರಾಣಾ ವ್ಯಾಪಾರ ಜಾ; ಮರಾಠಾ ಸಾ: ಜನವಾಡಾ ಗ್ರಾಮ ಅಂತ ತಿಳಿಸಿದ್ದು, ಈತನ ಹತ್ತಿರ 3200/- ರೂಪಾಯಿಗಳು, 2] ನಾಗೇಂದ್ರ ತಂದೆ ಭಗವಾನ್ ಪೂಜಾರಿ ವಯ: 38 ರ್ಷ ಉ: ವ್ಯಾಪಾರ ಜಾ: ಮರಾಠಾ ಸಾ: ಜನವಾಡಾ ಗ್ರಾಮ ಅಂತ ತಿಳಿಸಿದ್ದು ಈತನ ಹತ್ತಿರ 3100/- ರೂಪಾಯಿಗಳು, 3] ಲೊಕೇಶ ತಂದೆ ಸುಭಾಷ ಬಿರಾದರ ವಯ: 28 ರ್ಷ ಉ: ಕಿರಾಣಾ ವ್ಯಾಪಾರ ಜಾ: ಲಿಂಗಾಯತ ಸಾ: ಜನವಾಡಾ ಗ್ರಾಮ ಅಂತ ತಿಳಿಸಿದ್ದು, ಈತನ ಹತ್ತಿರ 2600/- ರೂಪಾಯಿಗಳು ದೊರೆತಿರುತ್ತವೆ. ಹಾಗು ಎಲ್ಲರ ಮಧ್ಯದಲ್ಲಿ ಜೂಜಾಟಕ್ಕೆ ಹಚ್ಚಿದ ಹಣ ಏಣಿಸಿ ನೋಡಲು ಒಟ್ಟು 12300/- ರೂಪಾಯಿಗಳು ಒಟ್ಟು 21,000/- ರೂಪಾಯಿಗಳು ಹಾಗು ಆರೋಪಿತರು ಜೂಜಾಟಕ್ಕೆ ಬಳಸಿದ 52 ಇಸ್ಪಿಟ್ ಎಲೆಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಲಾಯಿತು. ನಂತರ ಹಿಡಿದುಕೊಂಡಿರುವ ವ್ಯಕ್ತಿಗಳ ಪೈಕಿ ಶಿವಕಾಂತ ಪಾಂಡ್ರೆ ಈತನಿಗೆ ಓಡಿ ಹೊದವರ ಬಗ್ಗೆ ವಿಚಾರಿಸಲು ಒಡಿಹೊದವರ ಹೆಸರು 1] ಅರುಣ ತಂದೆ ವೈಜಿನಾಥ ಬಿರಾದರ, 2] ದಯಾನಂದ ನರೋಟೆ, 3] ಅಶೋಕ ಗಡಾದೆ ಮತ್ತು 4] ಜೈದೀಪ್ ಪಾಂಡ್ರೆ ಎಲ್ಲರೂ ಸಾ: ಜನವಾಡಾ ಗ್ರಾಮದವರು ಇರುತ್ತಾರೆ ಅಂತ ತಿಳಿಸಿರುತ್ತಾನೆ. ನಂತರ 3 ಜನ ಆರೋಪಿ ಹಾಗೂ ಮದ್ದೆಮಾಲಿನೋಂದಿಗೆ ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಭಾಲ್ಕಿ ಗ್ರಾಮೀಣ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 133/2022 ಕಲಂ. 363 ಐಪಿಸಿ :-**

ದಿನಾಂಕ; 08-09-2022 ರಂದು 1700 ಗಂಟೆಗೆ ಶ್ರೀಮತಿ ಗಂಗೂಬಾಯಿ ಗಂಡ ವೆಂಕಟರಾವ ಮಸ್ಕಲೆ ವಯ: 40 ರ್ಷ ಜಾ; ಟೋಕರೆ ಕೋಳಿ ಉ: ಮನೆ ಕೆಲಸ/ಒಕ್ಕಲುತನ ಸಾ; ಲಂಜವಾಡ ಇವರು ಠಾಣೆಗೆ ಹಾಜರಾಗಿ ದೂರು ರ್ಜಿ ಸಲ್ಲಿಸಿದ್ದು ಸಾರಾಂಶವೆನೆಂದ್ದರೆ, ನನಗೆ ನಾಲ್ಕು ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಹೀಗೆ 05 ಜನ ಮಕ್ಕಳಿರುತ್ತಾರೆ. ನನ್ನ ಮೂರು ಜನ ಹೆಣ್ಣು ಮಕ್ಕಳ ಮದುವೆಯಾಗಿದ್ದು ಅವರು ಅವರವರ ಗಂಡನ ಮನೆಯಲ್ಲಿ ಇರುತ್ತಾರೆ. ನನ್ನ ಹಿರಿಯ ಮಗಳು ಮಾನಸಿಕ ಅಸ್ವಸ್ಥಳಾಗಿದ್ದು ಅವಳು ಹಾಗೂ ನನ್ನ ಕಿರಿಯ ಮಗನಾದ ಭೀಮಾಶಂಕರ ತಂದೆ ವೆಂಕಟರಾವ ಮಸ್ಕಲೆ ವಯ: 16 ರ್ಷ ಜಾ: ಟೋಕರೆ ಕೋಳಿ ಉ: ವಿದ್ಯರ್ಥಿ ಸಾ: ಲಂಜವಾಡ ಹಾಗೂ ನಾನು ಮತ್ತು ನನ್ನ ಗಂಡನವರು ಮತ್ತು ನನ್ನ ಮಗಳಾದ ಸಂಗೀತಾ ಇವರ ಇಬ್ಬರು ಮಕ್ಕಳು (ಸಂಸ್ಕಾರ -8 ರ್ಷ ಹಾಗೂ ಸೃಷ್ಟಿ-4 ರ್ಷ) ನಮ್ಮ ಮನೆಯಲ್ಲಿ ಇರುತ್ತೇವೆ. ನನ್ನ ಮಗನಾದ ಭೀಮಾಶಂಕರ ಈತನು ನಮ್ಮೂರ ಸರಕಾರಿ ಶಾಲೆಯಲ್ಲಿ 08 ನೇ ತರಗತಿಯಲ್ಲಿ ಓದುತ್ತಿದ್ದಾನೆ. ಇವನು ಪ್ರತಿದಿನ 09:30 ಗಂಟೆಯ ಸುಮಾರಿಗೆ ಮನೆಯಿಂದ ಶಾಲೆಗೆ ಹೋಗಿ ಸಾಯಂಕಾಲ 04;30 ಗಂಟೆಯ ಸುಮಾರಿಗೆ ಮನೆಗೆ ಬರುತ್ತಾನೆ. ದಿನಾಂಕ: 07/09/2022 ರಂದು 09:30 ಗಂಟೆಗೆ ನನ್ನ ಮಗನು ಶಾಲೆಗೆ ಹೋಗುವಾಗ ನಾನು ಮಧ್ಯಾಹ್ನದಿಂದ ಊರಲಿ ಗಣಪತಿ ನೋಡುತ್ತೇನೆ ಮಧ್ಯಾಹ್ನದಿಂದ ಶಾಲೆಗೆ ಹೋಗುದಿಲ್ಲ ಅಂತ ಹೇಳಿರುತ್ತಾನೆ. ನಾನು ಬೇಡ ನಮ್ಮ ಹೋಲಕ್ಕೆ ಬಾ ಅಂತ ತಿಳಿಸಿರುತ್ತಾನೆ. ನಂತರ ಅವನು ಶಾಲೆಗೆ ಹೋಗಿದ್ದು ಇರುತ್ತದೆ. ನಂತರ ನಾನು ನನ್ನ ಹಿರಿಯ ಮಗಳಾದ ಅಂಜನಾ ಇವಳನ್ನು ಕರೆದುಕೊಂಡು ಹೋಲಕ್ಕೆ ಹೋಗಿ ಸಾಯಂಕಾಲ 05:30 ಗಂಟೆಯ ಸುಮಾರಿಗೆ ಮನೆಗೆ ಬಂದಿರುತ್ತೇವೆ. ಮನೆಗೆ ಬಂದಾಗ ನನ್ನ ಮಗನಾದ ಭೀಮಾ ಶಂಕರ ಇವನ ಬಗ್ಗೆ ವಿಚಾರಿಸಿದಾಗ ನನ್ನ ಮೊಮ್ಮಗಳಾದ ಸೃಷ್ಟಿ ಇವಳು ಅವನು ಮನೆಗೆ ಬಂದು, ಮನೆಯಲ್ಲಿದ್ದ ಒಂದು ಕ್ಯಾರಿ ಬ್ಯಾಗ ತೆಗೆದುಕೊಂಡು ಹೋಗಿರುತ್ತಾನೆ ಎಂದು ತಿಳಿಸಿರುತ್ತಾಳೆ. ನನ್ನ ಮೊಮ್ಮಗ ಸಂಸ್ಕಾರ ಇವನು ಅವನು ಶಾಲೆಯಲ್ಲಿಯೇ ಬ್ಯಾಗ ಇಟ್ಟಿದ್ದು ನಾನು ತೆಗೆದುಕೊಂಡು ಮನೆಗೆ ಬಂದಿರುತ್ತೇನೆಂದು ತಿಳಿಸಿರುತ್ತಾನೆ. ನಂತರ ನಾನು ನಮ್ಮ ಅಕ್ಕಪಕ್ಕದ ಮನೆಯವರಿಗೆ ಕೇಳಲು ನಮ್ಮ ಓಣಿಯ ಶ್ರೀದೇವಿ ಗಂಡ ಸಾಯಿನಾಥ ಇವರು 4: ಗಂಟೆಯ ಸುಮಾರಿಗೆ ನಮ್ಮ ಮನೆಯ ಮುಂದೆ ಹೋಗುವುದು ಮತ್ತು ನಾಗಣ್ಣಾ ಬಿರಾದಾರ ರವರ ಹೆಂಡತಿ ಬಸ ನಿಲ್ದಾಣದ ಬಳಿ 4:30 ಗಂಟೆಯ ಸುಮಾರಿಗೆ ನಿಂತ್ತಿರುವುದು ನೋಡಿರುವುದಾಗಿ ತಿಳಿಸಿರುತ್ತಾರೆ. ಸದರಿ ನಮ್ಮೂರ ಬಸ ನಿಲ್ದಾಣ ಬಳಿಯಿಂದ ನನ್ನ ಮಗನಿಗೆ ಅಂದಾಜು 4:30 ಗಂಟೆಯ ಸುಮಾರಿಗೆ ಯಾರೋ ಅಪಹರಿಸಿಕೊಂಡು ಹೋಗಿರುತ್ತಾರೆಂದು ನಮಗೆ ಸಂಶಯ ಇದೆ. ನನ್ನ ಮಗನ

ಚಹರೆ ಪಟ್ಟಿ ಈ ಕೆಳಗಿನಂತೆ ಇದೆ. ದುಂಡು ಮುಖ, ಗೋಧಿ ಮೈಬಣ್ಣ , ಎತ್ತರ 4 ಫಿಟ , ಕನ್ನಡ ಮತ್ತು ಮರಾಠಿ, ಹಿಂದಿ ಮಾತನಾಡುತ್ತಾನೆ. ಮೈಮೇಲೆ ಕೆಂಪು ಬಣ್ಣದ ಫುಲತೋಳ ಟಿರ್ಶ, ಕರಿಯ ಬಣ್ಣದ ಜಿನ್ಸ ಪ್ಯಾಂಟ ಧರಿಸಿರುತ್ತಾನೆ. ನನ್ನ ಮಗನಿಗೆ ನಿನ್ನೆ ಸಾಯಂಕಾಲದಿಂದ ನಮ್ಮ ನೆಂಟರಿಗೆ , ಗೆಳೆಯರಿಗೆ ಸಂಬಂಧಿಕರಿಗೆ ವಿಚಾರಿಸಿ ಭಾಲ್ಕಿ, ಭಾತಾಂಬ್ರಾ, ಮೊದಲಾದ ಕಡೆಗೆ ಹುಡುಕಾಡಲು ಅವನು ಸಿಕ್ಕಿರುವುದಿಲ್ಲ. ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಭಾಲ್ಕಿ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 146/2022 ಕಲಂ. ಮಹಿಳಾ ಕಾಣೆ :-**

ದಿನಾಂಕ 08/09/2022 ರಂದು 1245 ಗಂಟೆಗೆ ಶ್ರೀಮತಿ ಸೀತಾಬಾಯಿ ಗಂಡ ದಿ.ಶರಣಪ್ಪಾ ಕೈಕಾಡಿ ಸಾ; ಹಿರೆಮಠಗಲ್ಲಿ ಭಾಲ್ಕಿ ಇವರು ಠಾಣೆಗೆ ಹಾಜರಾಗಿ ದೂರು ಸಲ್ಲಿಸಿದ್ದು ಸಾರಾಂಶವೇನೆಂದರೆ. ನನ್ನ ಸೋಸೆಯಾದ ಛಾಯಾ ಗಂಡ ಪ್ರಕಾಶ ಇವಳಿಗೆ 1] ಅಜಯ 2] ಸುನೀಲ 3] ಮಮೀತಾ ಅಂತ ಹೀಗೆ ಎರಡು ಗಂಡು,ಒಂದು ಹೆಣ್ಣು ಮಕ್ಕಳು ಇರುತ್ತಾರೆ. ದಿನಾಂಕ 21/07/2022 ರಂದು ಮುಂಜಾನೆ 11;00 ಗಂಟೆಯ ಸುಮಾರಿಗೆ ನಾನು ಮತ್ತು ನನ್ನ ಮಗ ಪ್ರಕಾಶ ರವರು ಮನೆಯಲ್ಲಿದ್ದಾಗ ನಮ್ಮ ಸೋಸೆ ಛಾಯಾ ಇವಳು ನಮಗೆ ತಿಳಿಸಿದ್ದೇನೆಂಧರೆ, ರ್ಚಗೆ ಹೋಗಿ ಪ್ರರ್ಥನೆ ಮಾಡಿ ಬರುತ್ತೇನೆ ಅಂತ ಮನೆಯಲ್ಲಿ ಹೇಳಿ ಹೋದವಳು ಮರಳಿ ಮನೆಗೆ ಬರಲಿಲ್ಲಾ. ನಂತರ ನಾನು ಮತ್ತು ನನ್ನ ಮಗ ಪ್ರಕಾಶ ರವರು ಯಾಕೊ ಛಾಯಾ ಮನೆಗೆ ಬರಲಿಲ್ಲಾ ಅಂತ ದಾರಿ ನೋಡಿ ನಂತರ ನಾನು ಮತ್ತು ನನ್ನ ಮಗ ಪ್ರಕಾಶ ರವರು ಕೂಡಿ ಭಾಲ್ಕಿ ನಗರದಲ್ಲಿ ಹಾಗು ನಮ್ಮ ಸಂಬಂಧಿಕರ ಮನೆಗಳಲ್ಲಿ ಹಾಗೂ ಇತರೆ ಕಡೆಗಳಲ್ಲಿ ಹುಡಕಾಡಿ ಯಾವುದೆ ಮಾಹಿತಿ ಸಿಕ್ಕಿರುವುದಿಲ್ಲಾ. ನನ್ನ ಸೋಸೆ ಛಾಯಾ ಇವಳು ಕಾಣೆಯಾಗಿರುತ್ತಾಳೆ. ನನ್ನ ಸೋಸೆಗೆ ಹುಡಕಾಡಿ ಠಾಣೆಗೆ ಬಂದು ದೂರು ನೀಡಲು ವಿಳಂಬವಾಗಿರುತ್ತದೆ. ಕಾರಣ ಸೋಸೆ ಛಾಯಾ ಇವಳ ಚೆಹರಾಪಟ್ಟಿ ಈ ರೀತಿ ಇರುತ್ತದೆ. 1] ಹೆಸರು ;- ಛಾಯಾ, 2] ವಯಸ್ಸು ;- 30 ರ್ಷ, 3] ಮೈಬಣ್ಣ ;- ದುಂಡ ಮುಖ, ಸಾಧಾರನ ಮೈಕಟ್ಟು 4] ಭಾಷೆ ;- ಕನ್ನಡ, ಮರಾಠಿ, ಹಿಂದಿ 5] ಬಟ್ಟೆಗಳು ;- ಕೆಂಪು ಬಣ್ಣದ ಸೀರೆ, ನಿಲಿ ಬಣ್ಣದ ಬ್ಲಾವುಜ ಧರಿಸಿರುತ್ತಾಳೆ. ಕಾರಣ ನಮ್ಮ ಸೋಸೆ ಛಾಯಾ ಗಂಡ ಪ್ರಕಾಶ ಸಾ; ಹಿರೆಮಠಗಲ್ಲಿ ಭಾಲ್ಕಿ ಇವಳು ಕಾಣೆಯಾದ ಬಗ್ಗೆ ಕಾನೂನು ಕ್ರಮ ಕೈಕೊಳ್ಳುವಂತೆ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ

**ಚಿಟಗುಪ್ಪ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 110/2022 ಕಲಂ . ಮನುಷ್ಯ ಕಾಣೆ :-**

ದಿನಾಂಕ:08/09/2022 ರಂದು 1400 ಗಂಟೆಗೆ ಫರ್ಯಾದಿ ಶರಣಪ್ಪಾ ತಂದೆ ಗುಂಡಪ್ಪಾ ಬಾಜಿನೊರ, ವಯ:55 ರ್ಷ ಜಾತಿ:ಎಸ್,ಟಿ, ಗೊಂಡ, ಉದ್ಯೋಗ:ಒಕ್ಕಲುತನ, ಸಾ/ಬೇಳಕೇರಾ ತಾ/ ಚಿಟಗುಪ್ಪಾ ರವರು ಠಾಣೆಗೆ ಹಾಜರಾಗಿ ನೀಡಿದ ಹೇಳಿಕೆ ಸಾರಂಶವೆನೆಂದರೆ ನಾನು ಈ ಮೇಲ ನಮೂದ ಮಾಡಿದ ವಿಳಾಸದವನಿದ್ದು ಒಕ್ಕಲುತನ ಕೆಲಸ ಮಾಡಿಕೊಂಡಿರುತ್ತೇನೆ, ನನಗೆ ಮೂರು ಜನ ಹೆಣ್ಣು ಮತ್ತು ಒಬ್ಬನೆ ಗಂಡು ಮಗ ವಿದ್ದು ಇಬ್ಬರ ಹೆಣ್ಣು ಮಕ್ಕಳಿಗೆ ಮದುವೆ ಮಾಡಿಕೊಟ್ಟಿದ್ದು ಅವರು ಗಂಡನ ಮನೆಯಲ್ಲಿರುತ್ತಾರೆ, ನಾನು ಮತ್ತು ನನ್ನ ಹೆಂಡತಿ ಹಾಗು ನನ್ನ ಮಕ್ಕಳಾದ ದತ್ತು ವಯ 34 ರ್ಷ, ಹಾಗು ಮಗಳು ಬೇಳಕೇರಾದಲ್ಲಿಯೇ ವಾಸವಾಗಿರುತ್ತೇವೆ, ನಾನು ಮತ್ತು ನನ್ನ ಮಗನಾದ ದತ್ತು ಇಬ್ಬರು ನಮ್ಮ ಹೋಲದಲ್ಲಿ ಒಕ್ಕಲುತನ ಕೆಲಸ ಮಾಡಿಕೊಂಡಿರುತ್ತೇನೆ, ನಮ್ಮ ಹೋಲವನ್ನು ನಮ್ಮೂರ ನಾಗರಾಳ ಹಳ್ಳಕ್ಕೆ ಹತ್ತಿ ಇರುತ್ತದೆ. ಹೀಗಿರುವಾಗ ದಿನಾಂಕ 07-09-2022 ರಂದು ಮುಂಜಾನೆ 09:00 ಗಂಟೆಯ ಸುಮಾರಿಗೆ ನನ್ನ ಮಗನಾದ ದತ್ತು ಇತನು ನಾನು ನಮ್ಮ ಹೋಲಕ್ಕೆ ಹೋಗಿ ಬರುತ್ತೇನೆ ಅಂತಾ ಮನೆಯಲ್ಲಿ ನನಗೆ ಹೇಳಿ ಸೈಕಲ ತೆಗೆದುಕೊಂಡು ಹೋಗಿರುತ್ತಾನೆ, ನಂತರ ಮಧ್ಯಹ್ನವಾದರು ನನ್ನ ಮಗನು ಮರಳಿ ಮನೆಗೆ ಬರದೇ ಇರುವುದರಿಂದ ನಾನು ನಮ್ಮ ಹೋಲಕ್ಕೆ ಹೋಗುವಾಗ ದಾರಿಯಲ್ಲಿ ಬರುವ ನಮ್ಮೂರ ನಾಗರಾಳ ಹಳ್ಳದ ಶಿವರಾಜ ಲಟವಾ ರವರ ಹೋಲದ ಹತ್ತಿರ ಸೈಕಲ ಹಾಗು ಚಪ್ಪಲಿ ಬಿಟ್ಟಿದ್ದು ನಿನ್ನೆ ರಾತ್ರಿ ಮಳೆ ಬಿದ್ದಿದರಿಂದ ಮಳೆ ನೀರು ಹಳ್ಳ ತುಂಬಿ ಹರಿಯುತ್ತಿದ್ದರಿಂದ ಸೈಕಲ ಮತ್ತು ಚಪ್ಪಲಿ ಬಿಟ್ಟು ಹೋಲಕ್ಕೆ ಹೋಗಿರಬಹುದು ಅಂತಾ ತಿಳಿದು ನಾನು ಮುಂದೆ ಹೋಲಕ್ಕೆ ಹೋಗಿ ನೋಡಲು ಹೊಲದಲ್ಲಿಯು ಕಾಣಲ್ಲಿಲ್ಲ, ನಂತರ ನಾನು ಮತ್ತು ನನ್ನ ಹೆಂಡತಿ ಅನ್ನಪರ್ಣ ಇಬ್ಬರು ಹುಡುಕಾಡಿದರು ಸಿಕ್ಕಿರುವುದಿಲ್ಲಾ, ನಮ್ಮ ಮಕ್ಕಳಿಗೆ ಫೊನ ಮಾಡಿ ನನ್ನ ಮಗನ ಬಗ್ಗೆ ವಿಚಾರಿಸಲಾಗಿ ನನ್ನ ಮಗನು ಬಂದಿರುವುದಿಲ್ಲಾ ಅಂತಾ ತಿಲೀಸಿರುತ್ತಾರೆ, ನನ್ನ ಮಗನು ನಿನ್ನೆ ದಿನಾಂಕ07/09/2022 ರಂದು ಮುಂಜಾನೆ 09.00 ಗಂಟೆಗೆ ನಮ್ಮ ಮನೆಯಿಂದ ಹೋಲಕ್ಕೆ ಹೋಗಿ ಬರುತ್ತೇನೆಂದು ಹೇಳಿ ಹೋದವನು ಮರಳಿ ಮನೆಗೆ ಬರದೇ ಕಾಣೆಯಾಗಿರುತ್ತಾನೆ. ಕಾಣೆಯಾದ ನನ್ನ ಮಗ ದತ್ತುನನ್ನು ನಾನು ಮತ್ತು ನನ್ನ ಹೆಂಡತಿ ಬೇಳಕೇರಾ ಶಿವಾರದಲ್ಲಿ ಹಾಗು ಮಾಡಗೋಳ, ಹೋಸಳ್ಳಿ ಶಿವಾರಗಳ್ಳಿ ಹುಡುಕಾಡಿದರೂ ಸಿಗದೇ ಇದ್ದಾಗ

ಇಂದು ದಿನಾಂಕ:08/09/2022 ರಂದು ಠಾಣೆಗೆ ಬಂದು ದೂರು ನೀಡಲು ತಡವಾಗಿದೆ. ಕಾಣೆಯಾದ ನನ್ನ ಮಗನ ವಿವರ ಹಾಗು ಚಹರೆ ಪಟ್ಟಿ ಕೆಳಕಂಡಂತಿದೆ. ಹೆಸರು: ದತ್ತು ತಂದೆ: ಶರಣಪ್ಪಾ ಬಾಜಿನೊರ, ವಯ:55 ರ್ಷ ಜಾತಿ:ಎಸ್,ಟಿ, ಗೊಂಡ, ಉದ್ಯೋಗ:ಒಕ್ಕಲುತನ, ಸಾ/ಬೇಳಕೇರಾ, ಲಿಂಗ: ಗಂಡು, ಎತ್ತರ: 4' 10',' ಚಹರೆ ಪಟ್ಟಿ: ಸಾಧಾರಣವಾದ ಮೈಕಟ್ಟು & ಗೋಧಿ ಬಣ್ಣ, ಧರಿಸಿದಬಟ್ಟೆಗಳು: ಬಿಳಿ ರ್ಟ ಹಾಗು ಕರಿ ಪ್ಯಾಂಟ ಧರಿಸಿರುತ್ತಾನೆ ಅಂತ ಕೊಟ್ಟ ದೂರಿನ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಮನ್ನಾಏಖೆಳ್ಳಿ ಪೊಲೀಸ್ ಠಾಣೆ ಯು.ಡಿ.ಆರ್ ಸಂಖ್ಯೆ : 15/2022 ಕಲಂ 174 ಸಿ.ಆರ್.ಪಿ.ಸಿ :-**

ದಿನಾಂಕ: 08/09/2022 ರಂದು 19:15 ಗಂಟೆಗೆ ಫರ್ಯಾದಿ ಶ್ರೀ ಜಗನ್ನಾಥ ತಂದೆ ರಾಮಚಂದ್ರ ಕೋರಿ ವಯ 55 ವರ್ಷ ಜಾತಿ: ಕುರುಬ ಉದ್ಯೋಗ: ಒಕ್ಕಲುತನ ಕೆಲಸ ಸಾ||ಬನ್ನಳ್ಳಿ ರವರು ಠಾಣೆಗೆ ಹಾಜರಾಗಿ ತನ್ನ ಹೇಳಿಕೆಯನ್ನು ನೀಡಿದ ಸಾರಂಶವೇನೆAದರೆ ತಾನು ಒಕ್ಕಲುತನ ಕೆಲಸ ಮಾಡಿಕೊಂಡಿರುತ್ತೇನೆ. ನನ್ನ ಹೆಂಡತಿ ಯಂಕಮ್ಮಾ ಇವರು ಸಹ ಒಕ್ಕಲುತನ ಕೆಲಸ ಮಾಡುತ್ತಾರೆ. ದಿನಾಂಕ:08/09/2022 ರಂದು ಮುಂಜಾನೆ 10:00 ಗಂಟೆ ಸಮಯಕ್ಕೆ ದಿನನಿತ್ಯದಂತೆ ನಾನು ಮತ್ತು ನನ್ನ ಹೆಂಡತಿ ಯಂಕಮ್ಮಾ ಹಾಗು ನನ್ನ ಮಗನಾದ ಉಮೇಶ ಮೂವರು ನಮ್ಮ ಹೊಲಕ್ಕೆ ಹೊಗಿರುತ್ತೇವೆ. ನನ್ನ ಹೆಸರಿನಲ್ಲಿ ಇದ್ದ ಜಮೀನು ಸರ್ವೆ ನಂ: 115 ರಲ್ಲಿ 2 ಏಕ್ಕರೆ ಜಮೀನು ಇದ್ದು, ಒಂದು ಏಕ್ಕರೆ ಜಮೀನಿನಲ್ಲಿ ರೇಸ್ಮಿ ಬೆಳೆ ಬೆಳೆದಿದ್ದು, ರೇಸ್ಮಿ ಬೆಳೆಯಲ್ಲಿ ನನ್ನ ಹೆಂಡತಿ ಯಂಕಮ್ಮಾ ಇವಳು ಹುಲ್ಲು ಕಳೆ ತೆಗೆ◌ೆಯುತ್ತಿದ್ದಳು ನನ್ನ ಮಗನಾದ ಉಮೇಶ ಈತನು ಕಳೆ ತೆಗೆದA ಹುಲ್ಲು ಒಂದೇ ಕಡೆಗೆ ಜಮಾಯಿಸುತ್ತಿದ್ದನು. ನಾನು ನಮ್ಮ ಹತ್ತಿರ ಇದ್ದ ಜಾನುವಾರುಗಳು ಮೇಯಿಸುತ್ತಿದ್ದಾಗ ಸಾಯಂಕಾಲ 4:30 ಪಿ.ಎಂ ಗಂಟೆ ಸಮಯಕ್ಕೆ ನನ್ನ ಹೆಂಡತಿ ಯಂಕಮ್ಮಾ ಇವಳು ಚೀರಿದಾಗ ಅಲ್ಲಿಯೇ ಇದ್ದ ನಾನು ಮತ್ತು ನನ್ನ ಮಗನಾದ ಉಮೇಶ ನನ್ನ ಹೆಂಡತಿ ಯಂಕಮ್ಮಾ ಇವಳ ಹತ್ತಿರ ಹೋಗಿ ನನ್ನ ಹೆಂಡತಿಗೆ ವಿಚಾರಿಸಲು ನನ್ನ ಎಡ ಕಾಲಿನ ಬಲ ಭಾಗಕ್ಕೆ ಒಂದು ವಿಷಕಾರಿ ಹಾವು ಕಡೆದಿರುತ್ತದೆ. ಅಂತ ಹೇಳಿದ್ದು, ನಾನು ನೋಡಲು ನನ್ನ ಹೆಂಡತಿಯ ಎಡ ಕಾಲಿನ ಬಲ ಭಾಗಕ್ಕೆ ರಕ್ತ ಸ್ರಾವವಾಗುತ್ತಿದ್ದು, ನನ್ನ ಹೆಂಡತಿಗೆ ಚಿಕಿತ್ಸೆ ಕುರಿತು ನಾನು ಮತ್ತು ನನ್ನ ಮಗನಾದ ಉಮೇಶ ಇಬ್ಬರು ಅಲ್ಲಿಯೇ ರೋಡಿನಲ್ಲಿ ಹೊಗುತ್ತಿದ್ದ ಒಂದು ಖಾಸಗಿ ಆಟೊದಲ್ಲಿ ಹಾಕಿಕೊಂಡು ಮನ್ನಾಏಖೇಳ್ಳಿ ಸರಕಾರಿ ಆಸ್ಪತ್ರೆಗೆ ತಂದಾಗ ಇಲ್ಲಿ ವೈಧ್ಯರು ಚಿಕಿತ್ಸೆ ನೀಡಿರುತ್ತಾರೆ. ನಂತರ ವೈಧ್ಯರು ಹೆಚ್ಚಿನ ಚಿಕಿತ್ಸೆ ಕುರಿತು ಬೀದರ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ನಂತರ ನನ್ನ ಹೆಂಡತಿಗೆ ಬೀದರ ಜಿಲ್ಲಾ ಆಸ್ಪತ್ರೆಗೆ ಸೇರಿಕ ಮಾಡಿದಾಗ ಚಿಕಿತ್ಸೆ ಫಲಕಾರಿಯಾಗದೇ ನನ್ನ ಹೆಂಡತಿ ಯಂಕಮ್ಮಾ ಇವಳು ಸಾಯಂಕಾಲ 6:00 ಪಿ.ಎಂ ಗಂಟೆಗೆ ಮೃತಪಟ್ಟಿರುತ್ತಾಳೆ ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಸಂತಪೂರ್ ಪೊಲೀಸ್ ಠಾಣೆ ಯು.ಡಿ.ಆರ್ ಸಂಖ್ಯೆ :- 0009/2022 ಕಲಂ. 174 ಸಿ.ಆರ್.ಪಿ.ಸಿ :-**

ದಿನಾಂಕ 08/09/2022 ರಂದು 10.00 ಗಂಟೆಗೆ ಬೀದರ ಸರಕಾರಿ ಆಸ್ಪತ್ರೆಯಲ್ಲಿ ಮೃತನ ತಾಯಿ ಗುಂಡಮ್ಮಾ ಗಂಡ ಅಮೃತ ಸಾ/ ಧೂಪತಮಾಹಾಗಾಂವ ಇವರಿಗೆ ವಿಚಾರಿಸಿದ್ದು ಅವರು ರ್ರಿ ಕೊಟ್ಟ ಸಾರಾಂಶವೆನೆಂದರೆ ನಾನು ಗುಂಡಮ್ಮಾ ಗಂಡ ಅಮೃತ ಖಾನಾಪೂರೆ ವ, 60 ರ್ಷ ಜಾ/ ಲಿಂಗಾಯತ ಉ/ ಮನೆ ಕೇಲಸ ಸಾ/ ಧೂಪತಮಾಗಾಂವ ನನಗೆ 5 ಜನ ಮಕ್ಕಳೀದ್ದು 3 ಹೆಣ್ಣು 2 ಗಂಡು ಮಕ್ಕಳಿದ್ದು ಹೆಣ್ಣು ಮಕ್ಕಳ ಮದುವೆ ಆಗಿದ್ದು ಒಬ್ಬ ಗಂಡು ಮಗ ಮಾಣಿಕ ಇತನ ಮದುವೆ ಮಾಡಿದ್ದು ಅವನಿಗೆ 3 ಜನ ಮಕ್ಕಳಿದ್ದು ಮಕ್ಕಳೂ ಚಿಕ್ಕವರಿದ್ದು ಇನ್ನೊಬ್ಬ ಮಗ ಗಣಪತಿ ಇವನ ಮದುವೆ ಆಗಿರುವದಿಲ್ಲಾ ನಾವು ಎಲ್ಲರೂ ಒಂದೆ ಕುಟುಂಬದಲ್ಲಿ ವಾಸವಾಗಿರುತ್ತೆವೆ ನನ್ನ ಮಗ ಮಾಣಿಕ ಇತನು ಒಕ್ಕಲುತನ ಕೇಲಸ ಮಾಡಿಕೊಂಡಿದ್ದು ತನ್ನ ತಂದೆಗೆ ವಯಸಾಗಿದರಿಂದ ನಮ್ಮ ಹೋಲ ಮನೆ ಅವನ ಮೇಲೆ ಜವಬ್ದಾರಿ ಇರುತ್ತದೆ ನನ್ನ ಗಂಡನಾದ ಅಮೃತ ಇವರ ಹೆಸರಲ್ಲಿ ಇದ್ದ ಹೋಲ ರ್ವೆ ನಂ 129 ಇದರಲ್ಲಿ 2 ಎಕರೆ 20 ಗುಂಟೆ ಇರುತ್ತದೆ ಇನ್ನೊಂದು ರ್ವೆ ನಂ 124 ರಲ್ಲಿ ಒಂದು ಎಕರೆ 36 ಗುಂಟೆ ಜಮೀನು ಇರುತ್ತದೆ ಇದರ ಮೇಲೆ ಪಿ,ಕೆ ಪಿ ಎಸ್ ಲಾದಾದಲ್ಲಿ (ಡಿ.ಸಿ.ಸಿ ಬ್ಯಾಂಕ) 50.000-/ ಸಾವಿರ ಸಾಲವನು ತೆಗೆದು ಹೋಲದಲ್ಲಿ ಬೀಜ ಭರಣ ಗೊಬ್ಬರು ತಂದು ಬೀತ್ತನೆ ಮಾಡಿದ್ದು ಇವಗ ಹೋಲದಲ್ಲಿ ಮಳೆ ಹೆಚ್ಚಾಗಿ ಶಂಕುದ ಹುಳದ ಬಾದಯಿಂದ ಬೆಳ್ಳೆಯನು ಹಾಳಾಗಿರುತ್ತದೆ ಅದರಿಂದ ನನ್ನ ಮಗ ಮನೆಗೆ ಬಂದು ನಮ್ಮ ಮುಂದೆ ಬೆಳೆ ಹಾಳಾಗಿದೆ ಜೀವನ ಹೇಗೆ ಸಾಗಿಸಬೇಕು ಎಂದು ತಿಳಿಸುತ್ತಿದ್ದು ಆದರು ಸಹ ನಾವು ಎಲ್ಲರೂ ಕೂಡಿ ನನ್ನ ಮಗನಿಗೆ ಸಮದಾನ ಮಾಡಿರುತ್ತವೆ. ನಾವು ಎಲ್ಲರೂ ನಮ್ಮೂರ ಗಣಪತಿ ಕೂಡಿಸುವ ಸ್ಥಳದಲ್ಲಿ ಪೂಜೆ ನಿಮಿತ್ಯವಾಗಿ ಹೋಗಿದ್ದು ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ನನ್ನ ಮಗಾ ಮಾಣಿಕ ಇತನು ಹುಲ್ಲಿಗೆ ಹೋಡೆಯುವ ಔಷಧ್ಧಿ ಕುಡಿದಿದು ಮನೆಯಲ್ಲಿ

ಇದ್ದಾಗ ನಾವು ಎಲ್ಲರೂ ಮನೆಗೆ ಬಂದಾಗ ನನ್ನ ಮಗ ತಿಳಿಸಿದ್ದು ನಾನು ಹೊಲದಲ್ಲಿ ಬೆಳೆ ಮಳೆ ಬಿದ್ದು ನೀರು ನಿಂತು ನಾಷವಾಗಿದರಿಂದ ವಿಷ ಕೂಡಿದಿರುತ್ತೆನೆ ಅಂತ ತಿಳಿಸಿದ ತಕ್ಷಣ ನನ್ನ ಮಗನಿಗೆ ಸಂತಪೂರ ಸರಕಾರಿ ಆಸ್ಪತ್ರೆಗೆ ತಂದು ಅಲ್ಲಿಂದ ಹೆಚ್ಚಿನ ಚಿಕಿತ್ಸೆ ಕುರಿತು ಅಪೆಕ್ಷ. ಹಾಗೂ ಆರೋಗ್ಯಾ ಖಾಸಗಿ ಆಸ್ಪತ್ರೆಗೆ ತೋರಿಸಿದ್ದು ನಂತರ ದಿನಾಂಕ 05/09/2022 ರಂದು ಬೀದರ ಸರಕಾರಿ ಆಸ್ಪತ್ರೆಗೆ ತಂದು ಸೇರಿಕ ಮಾಡಿದ್ದು ಆದರೆ ಗುಣಮುಖವಾಗದೆ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 08/09/2022 ರಂದು ಬೆಳ್ಳಿಗೆ 0930 ಗಂಟೆಗೆ ಮೃತ ಪಡಿರುತ್ತಾನೆ ಕಾರಣ ನನ್ನ ಮಗ ಮಾಣಿಕ ಇತನು ಸಾಲ ಹೆಗೆ ತಿರಿಸಬೇಕೆಂದು ಬೇಜಾರಾಗಿ ವಿಷ ಸೇವೆನೆ ಮಾಡಿ ಮೃತ ಪಟ್ಟಿರುತ್ತಾನೆ ಅಂತ ಕೊಟ್ಟ ದೂರಿನ ಸಾರಾಂಶದ ಮೇರೆಗೆ ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಖಟಕಚಿಂಚೋಳಿ ಪೊಲೀಸ್ ಠಾಣೆ ಪ್ರಕರ ಣ ಸಂಖ್ಯೆ : 76/2022 ಕಲಂ. 32, 34 ಕರ್ನಾಟಕ ಅಬಕಾರಿ ಕಾಯ್ದೆ :-**

ದಿನಾಂಕ: 08/09/2022 ರಂದು 14:00 ಗಂಟೆಗೆ ಸಿಪಿಐ ಭಾಲ್ಕಿ ಗ್ರಾಮೀಣ ರವರು ಖಟಕ ಚಿಂಚೋಳಿ ಪೊಲೀಸ ಠಾಣೆಯಲ್ಲಿರುವಾಗ ಖಚಿತ ಭಾತ್ಮಿ ಬಂದಿದ್ದೆನೆAದರೆ, ಮದಕಟ್ಟಿ ಗ್ರಾಮದಲ್ಲಿನ ಬಸವೇಶ್ವರ ಮೂರ್ತಿಯ ಮುಂದುಗಡೆಯ ಸಾರ್ವಜನಿಕ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ಪ್ಲಾಸ್ಟೀಕ್ ಚಿಲದಲ್ಲಿ ಅನಧಿಕೃತವಾಗಿ ಸರಾಯಿ ಸಂಗ್ರಹಿಸಿಟ್ಟುಕೊAಡು ಮಾರಾಟ ಮಾಡುತಿದ್ದಾನೆ, ಅಂತ ಭಾತ್ಮಿ ಬಂದ ಮೇರೆಗೆ ಸಿಬ್ಬಂದಿ ಹಾಗೂ ಪಂಚರೊಂದಿಗೆ ಮದಕಟ್ಟಿ ಗ್ರಾಮದ ಬಸವೇಶ್ವರ ಮೂರ್ತಿಯ ಹತ್ತಿರ ಸ್ವಲ್ಪ ದೂರದಲ್ಲಿ 15:00 ಗಂಟೆಗೆ ಹೊಗಿ ನೋಡಲು ಬಸವೇಶ್ವರ ಮೂರ್ತಿಯ ಮುಂದುಗಡೆ ಇರುವ ಸಾರ್ವಜನಿಕ ರೋಡಿನ ಮೇಲೆ ಒಬ್ಬ ವ್ಯಕ್ತಿ ಪ್ಲಾಸ್ಟೀಕ್ ಚಿಲದಲ್ಲಿ ಅನಧಿಕೃತವಾಗಿ ಸರಾಯಿ ಸಂಗ್ರಹಿಸಿಕೊAಡು ಮಾರಾಟ ಮಾಡುತ್ತಿರುವುದನ್ನು ಖಚಿತ ಪಡಿಸಿಕೊಂಡು ಸದರಿ ಪಂಚರ ಸಮಕ್ಷಮ ನಮ್ಮ ಪೊಲೀಸ ಸಿಬ್ಬಂದಿಯವರ ಸಹಾಯದೊಂದಿಗೆ ಸರಾಯಿ ಮಾರಾಟ ಮಾಡುತ್ತಿರುವ ವ್ಯಕ್ತಿಯ ಮೇಲೆ 15:10 ಗಂಟೆಗೆ ದಾಳಿ ಮಾಡಿ ಸದರಿ ವ್ಯಕ್ತಿಗೆ ಹಿಡಿದುಕೊಂಡಿದ್ದು, ಆತನ ಹೇಸರು ಮತ್ತು ವಿಳಾಸ ವಿಚಾರಿಸಲು ಆತ ತನ್ನ ಹೆಸರು ಏಕನಾಥ ತಂದೆ ಪ್ರಭಾಕರರಾವ ಐನಾಪೂರೆ ವಯ: 35 ವರ್ಷ ಜಾ: ಮರಾಠ ಉ: ಕೂಲಿ ಕೆಲಸ ಸಾ: ಮದಕಟ್ಟಿ ಅಂತ ತಿಳಿಸಿದ್ದು, ಸದರಿ ವ್ಯಕ್ತಿಯ ಮುಂದುಗಡೆ ಇರುವ ಪ್ಲಾಸ್ಟೀಕ್ ಚಿಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲು ಅದರಲ್ಲಿ 1) ಯು.ಎಸ್ ವಿಸ್ಕಿ 90 ಎಮ್.ಎಲ್ ನ 22 ಪ್ಲಾಸ್ಟೀಕ್ ಬಾಟಲಗಳಿದ್ದು, ಒಂದರ ಬೆಲೆ 35.13 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 772.86 ರೂಪಾಯಿ ಇರುತ್ತದೆ. 2) ಒರಿಜಿನಲ್ ಚ್ವಾಯಿಸ್ 90 ಎಮ್.ಎಲ್ ನ 54 ಟೆಟ್ರಾ ಪ್ಯಾಕಗಳಿದ್ದು ಒಂದರ ಬೆಲೆ 35.13 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 1897.02 ಇರುತ್ತದೆ. 3) ಬ್ಯಾಗಪೈಪರ್ ವಿಸ್ಕಿ 180 ಎಮ್.ಎಲ್ ನ 10 ಟೆಟ್ರಾ ಪ್ಯಾಕಗಳಿದ್ದು ಒಂದರ ಬೆಲೆ 106.23 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 1062.30 ಇರುತ್ತದೆ. 4) ಓಲ್ಡ್ ಟವರೆನ್ ವಿಸ್ಕಿ 180 ಎಮ್.ಎಲ್ ನ 05 ಟೆಟ್ರಾ ಪ್ಯಾಕಗಳಿದ್ದು ಒಂದರ ಬೆಲೆ 86.75 ರೂಪಾಯಿ ಇದ್ದು ಅವುಗಳ ಒಟ್ಟು ಬೆಲೆ 433.75 ಇರುತ್ತದೆ. ಹೀಗೆ ಒಟ್ಟು 9 ಲೀಟರ್ 540 ಎಮ್.ಎಲ್ ನ 4165.93 ರೂಪಾಯಿ ಮೌಲ್ಯದ ವಿವಿಧ ಮಾದರಿಯ ಸರಾಯಿ ಇದ್ದು. ಈ ವೇಳೆಯಲ್ಲಿ ನಾನು ಸದರಿ ವ್ಯಕ್ತಿಗೆ ಈ ಸರಾಯಿ ಮಾರಾಟ ಮಾಡಲು ಯಾವುದಾದರು ಇಲಾಖೆಯಿಂದ ಅನುಮತಿ ಪಡೆದುಕೊಂಡಿದ್ದಿಯಾ ಅಂತ ವಿಚಾರಿಸಲು ಸದರಿ ವ್ಯಕ್ತಿ ಯಾವುದೇ ಇಲಾಖೆಯಿಂದ ಅನುಮತಿ ಪಡೆದುಕೊಂಡಿರುವುದಿಲ್ಲ ಅಂತ ತಿಳಿಸಿರುತ್ತಾರೆ. ನಂತರ ಆರೋಪಿಯನ್ನು ವಶಕ್ಕೆ ಪಡೆದು ಮುದ್ದೆ ಮಾಲನ್ನು ಜಪ್ತಿ ಮಾಡಿ ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಭಾಲ್ಕಿ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 147/2022 ಕಲಂ. 32, 34 ಕರ್ನಾಟಕ ಅಬಕಾರಿ ಕಾಯ್ದೆ :-**

ದಿನಾಂಕ 08/09/2022 ರಂದು 1130 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಖಚೀತ ಬಾತ್ಮಿ ಬಂದಿದ್ದೇನೆಂದರೆ, ಭಾಲ್ಕಿ ಬಸವೇಶ್ವರ ಚೌಕ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಸರಾಯಿ ಮಾರಾಟ ಮಾಡಲು ಸಾಗಾಟ ಮಾಡುತಿದ್ದಾನೆ ಅಂತ ಖಚೀತ ಮಾಹಿತಿ ಬಂದ ಮೇರೆಗೆ ಕೂಡಲೇ ಪಂಚರು ಹಾಗೂ ಸಿಬ್ಬಂದಿಯವರೊಂದಿಗೆ ಭಾಲ್ಕಿಯ ಬಸವೇಶ್ವರ ಚೌಕ ಹತ್ತಿರ ಸ್ವಲ್ಪ ದೂರದಲ್ಲಿ 12;10 ಗಂಟೆಗೆ ಹೋಗಿ ಮರೆಯಾಗಿ ನಿಂತು ನೋಡಲು ಒಬ್ಬ ವ್ಯಕ್ತಿ ತನ್ನ ಮುಂದೆ 3 ಕಾಟನದಲ್ಲಿ ಸರಾಯಿ ಬಾಟಲಗಳು ಇಟ್ಟುಕೊಂಡು ಮಾರಾಟ ಮಾಡಲು ಸಾಗಾಣಿಕೆ ಮಾಡುವ ಕುರಿತು ರೋಡಿನ ಪಕ್ಕದಲ್ಲಿ ವಾಹನದ ದಾರಿ ಕಾಯುತ್ತಾ ನಿಂತಿದ್ದನ್ನು ನೋಡಿ ಖಚೀತ ಪಡಿಸಿಕೊಂಡು, ಪಂಚರ ಸಮಕ್ಷಮ ಸದರಿ ವ್ಯಕ್ತಿಯ ಮೇಲೆ 12;20 ಗಂಟೆಗೆ ಸಿಬ್ಬಂದಿಯವರ ಸಹಾಯದಿಂದ ದಾಳಿ ಮಾಡಿ ಸದರಿ ವ್ಯಕ್ತಿಗೆ ಹೀಡಿದು ಆತನ ಹೆಸರು ವಿಳಾಸ ವಿಚಾರಿಸಲು ಗಣೇಶ ತಂದೆ ಅನೀಲ ವರವಟ್ಟೆ ವಯಸ್ಸು 25 ರ್ಷ ಜಾ; ಎಸ್.ಸಿ. ಮಾದಿಗಾ ಉ; ಕೂಲಿ ಕೆಲಸ ಸಾ; ದಾಡಗಿಬೇಸ ಭಾಲ್ಕಿ ತಾ; ಭಾಲ್ಕಿ. ಅಂತ ತಿಳಿಸಿದ್ದು ಸದರಿ ವ್ಯಕ್ತಿಗೆ ಸರಾಯಿ ಬಾಟಲಗಳು ಎಲ್ಲಿಂದ ತೆಗೆದುಕೊಂಡು ಬಂದಿದಿ ಮತ್ತು ಸರಾಯಿ ಮಾರಾಟ ಮಾಡಲು, ಸಾಗಾಣಿಕೆ ಮಾಡುವ ಕುರಿತು ನಿನ್ನ ಹತ್ತಿರ ಯಾವುದಾದರು ಸರಕಾರದಿಂದ ಅನುಮತಿ ಪತ್ರ ಇದೆಯೇ ಅಂತ ಕೇಳಿದಾಗ ಆತನು ತನ್ನ

ಹತ್ತಿರ ಯಾವುದೆ ಪರವಾನಿಗೆ ಪತ್ರ ಇರುವುದಿಲ್ಲಾ ನಾನು ಭಾಲ್ಕಿ ನಗರದಲ್ಲಿರುವ ಸಂದೀಪ ರವರ ಅಂಬರೀಷ ವಾಯಿನ ಶಾಪದಲ್ಲಿ, ಅರುಣ ಮ್ಯಾನೇಂಜರ ರವರಲ್ಲಿ ಖರೀದಿ ಮಾಡಿಕೊಂಡು ಮಾರಾಟ ಮಾಡಲು ಸಾಗಾಣಿಕೆ ಮಾಡುತಿದ್ದೇನೆ. ಅಂತ ತಿಳಿಸಿದ್ದರಿಂದ ಸದರಿಯವನ ವಶದಲ್ಲಿದ್ದ 3 ಪುಟ್ಟದ ಕಾಟನದಲ್ಲಿ ಪರಿಶೀಲಿಸಿ ನೊಡಲು ಒಟ್ಟು 90 ಎಂ.ಎಲ್. ವುಳ್ಳ ಒಟ್ಟು 288 ಒರಿಜನಲ್ ಚಾಯಿಸ ವಿಸ್ಕಿ ಸರಾಯಿ ತುಂಬಿದ ಪುಟ್ಟದ ಪೋಚಗಳು ಇದ್ದು ಅದರಲ್ಲಿ ಪ್ರತಿಯೊಂದು ಪುಟ್ಟದ ಬಾಟಲ ಅ;ಕಿ; 35 ರೂ ಇದ್ದು ಹೀಗೆ ಒಟ್ಟು ಎಲ್ಲಾ ಸರಾಯಿ ಪುಟ್ಟದ ಪೋಚಗಳು ಅ.ಕಿ. 10,080/- ರೂ. ಇದ್ದು ಸದರಿ ಸರಾಯಿ ಪುಟ್ಟದ ಬಾಟಲಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ನಂತರ ಪಿ.ಎಸ್.ಐ. ರವರು ಸದರಿ ಗಣೇಶ ಈತನ ಅಂಗ ಶೋಧನೆ ಮಾಡಲು ಆತನ ಹತ್ತಿರ 13,500/- ರೂ ನಗದು ಹಣ ಇದ್ದು ಸದರಿ ಹಣ ಜಪ್ತಿ ಮಾಡಿ, ಆರೋಪಿತನಿಗೆ ವಶಕ್ಕೆ ತೆಗೆದುಕೊಂಡು ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.

**ಭಾಲ್ಕಿ ನಗರ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ : 148/2022 ಕಲಂ. 32, 34 ಕರ್ನಾಟಕ ಅಬಕಾರಿ ಕಾಯ್ದೆ :-**

ದಿನಾಂಕ 08/09/2022 ರಂದು 1330 ಗಂಟೆಗೆ ಪಿಎಸ್ಐ ರವರು ಠಾಣೆಯಲ್ಲಿದ್ದಾಗ ಖಚೀತ ಬಾತ್ಮಿ ಬಂದಿದ್ದೇನೆಂದರೆ, ಭಾಲ್ಕಿ ಅಗ್ನಿಶಾಮಕ ಕ್ರಾಸ್ ಹತ್ತಿರ ಒಬ್ಬ ವ್ಯಕ್ತಿ ಅಕ್ರಮವಾಗಿ ಸರಾಯಿ ಮಾರಾಟ ಮಾಡಲು ಸಾಗಾಟ ಮಾಡುತಿದ್ದಾನೆ ಅಂತ ಖಚೀತ ಮಾಹಿತಿ ಬಂದ ಮೇರೆಗೆ ಕೂಡಲೇ ಪಂಚರು ಹಾಗೂ ಸಿಬ್ಬಂದಿಯವರೊಂದಿಗೆ ಅಂಬಿಕಾ ಲಾಡ್ಜ ಹತ್ತಿರ ಬಳಿ ಹೋಗಿ ಮರೆಯಾಗಿ ನಿಂತು ನೋಡಲು ಒಬ್ಬ ವ್ಯಕ್ತಿ ಅಗ್ನಿಶಾಮಕ ಕ್ರಾಸ್ ಹತ್ತಿರ ತನ್ನ ಮುಂದೆ ಒಂದು ಕಾಟನದಲ್ಲಿ ಸರಾಯಿ ಬಾಟಲಗಳು ಇಟ್ಟುಕೊಂಡು ಮಾರಾಟ ಮಾಡಲು ಸಾಗಾಣಿಕೆ ಮಾಡುವ ಕುರಿತು ರೋಡಿನ ಪಕ್ಕದಲ್ಲಿ ವಾಹನದ ದಾರಿ ಕಾಯುತ್ತಾ ನಿಂತಿದ್ದನ್ನು ನೋಡಿ ಖಚೀತ ಪಡಿಸಿಕೊಂಡು, ಪಂಚರ ಸಮಕ್ಷಮ ಸದರಿ ವ್ಯಕ್ತಿಯ ಮೇಲೆ 14;20 ಗಂಟೆಗೆ ಸಿಬ್ಬಂದಿಯವರ ಸಹಾಯದಿಂದ ದಾಳಿ ಮಾಡಿ ಸದರಿ ವ್ಯಕ್ತಿಗೆ ಹಿಡಿದು ಆತನ ಹೆಸರು ವಿಳಾಸ ವಿಚಾರಿಸಲು ಬಸವರಾಜ ತಂದೆ ವಾಸುದೇವ ಪವಾರ ವಯಸ್ಸು 45 ರ್ಷ ಜಾ; ಎಸ್.ಸಿ. ಲಮಾಣಿ ಉ; ಕೂಲಿ ಕೆಲಸ ಸಾ; ಬೀರಿ (ಬಿ) ಥಾಂಡಾ ತಾ; ಭಾಲ್ಕಿ. ಅಂತ ತಿಳಿಸಿದ್ದು ಸದರಿ ವ್ಯಕ್ತಿಗೆ ಸರಾಯಿ ಬಾಟಲಗಳು ಎಲ್ಲಿಂದ ತೆಗೆದುಕೊಂಡು ಬಂದಿದಿ ಮತ್ತು ಸರಾಯಿ ಮಾರಾಟ ಮಾಡಲು, ಸಾಗಾಣಿಕೆ ಮಾಡುವ ಕುರಿತು ನಿನ್ನ ಹತ್ತಿರ ಯಾವುದಾದರು ಸರಕಾರದಿಂದ ಅನುಮತಿ ಪತ್ರ ಇದೆಯೇ ಅಂತ ಕೇಳಿದಾಗ ಆತನು ತನ್ನ ಹತ್ತಿರ ಯಾವುದೆ ಪರವಾನಿಗೆ ಪತ್ರ ಇರುವುದಿಲ್ಲಾ ನಾನು ಭಾಲ್ಕಿ ನಗರದಲ್ಲಿರುವ ಸುಂಟೆ ವಾಯಿನ ಶಾಪದಲ್ಲಿ, ವಿವೇಕಾನಂದ ಸ್ವಾಮಿ ತಂದೆ ಗುಂಡಯ್ಯಾ ಸ್ವಾಮಿ ಮ್ಯಾನೇಂಜರ ರವರಲ್ಲಿ ಖರೀದಿ ಮಾಡಿಕೊಂಡು ಮಾರಾಟ ಮಾಡಲು ಸಾಗಾಣಿಕೆ ಮಾಡುತಿದ್ದೇನೆ. ಅಂತ ತಿಳಿಸಿದ್ದರಿಂದ ಸದರಿಯವನ ವಶದಲ್ಲಿದ್ದ ಒಂದು ಪುಟ್ಟದ ಕಾಟನದಲ್ಲಿ ಪರಿಶೀಲಿಸಿ ನೊಡಲು ಒಟ್ಟು 90 ಎಂ.ಎಲ್. ವುಳ್ಳ ಒಟ್ಟು 96 ಒರಿಜನಲ್ ಚಾಯಿಸ ವಿಸ್ಕಿ ಸರಾಯಿ ತುಂಬಿದ ಪುಟ್ಟದ ಪೋಚಗಳು ಇದ್ದು ಅದರಲ್ಲಿ ಪ್ರತಿಯೊಂದು ಪುಟ್ಟದ ಬಾಟಲ ಅ;ಕಿ; 35 ರೂ ಇದ್ದು ಹೀಗೆ ಒಟ್ಟು ಎಲ್ಲಾ ಸರಾಯಿ ಪುಟ್ಟದ ಪೋಚಗಳು ಅ.ಕಿ. 3,360/- ರೂ. ಇದ್ದು ಸದರಿ ಸರಾಯಿ ಪುಟ್ಟದ ಬಾಟಲಗಳು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು ಆರೋಪಿಯನ್ನು ವಶಕ್ಕೆ ತೆಗೆದುಕೊಂಡು ಠಾಣೆಗೆ ಬಂದು ಪ್ರಕರಣ ದಾಖಲಿಸಿ ತನಿಖೆ ಕೈಕೊಳ್ಳಲಾಗಿದೆ.